ಸಂಭ್ರಮದ 'ವಿವೇಕ ಯುವ ಚೇತನ' ಶಿಬಿರ

ಸ್ವಾಮಿ ವಿವೇಕಾನಂದರು ಭಾರತದ ಯುವಕರಿಗೆ ಆದರ್ಶಪ್ರಾಯರಾಗಿದ್ದಾರೆ. ಯುವಕರಲ್ಲಿ ಏಕಾಗ್ರತೆ, ಚಾರಿತ್ರ್ಯ ಮತ್ತು ಆತ್ಮವಿಶ್ವಾಸಗಳನ್ನು ಮೂಡಿಸಬಲ್ಲ ಅನನ್ಯಚೇತನವಾಗಿದ್ದಾರೆ. ಅವರ ಚಿಂತನೆಗಳನ್ನು ಇಂದಿನ ಯುವಕರಿಗೆ ಪರಿಚಯ ಮಾಡಿಕೊಡುವ ಆವಶ್ಯಕತೆಯನ್ನು ಮನಗಂಡು, ಸ್ವಾಮೀಜಿಯವರ ೧೫೦ನೇ ವರ್ಷದ ಜನ್ಮದಿನೋತ್ಸವದ ಅಂಗವಾಗಿ **'ವಿವೇಕ ಯುವಚೇತನ'** ಎನ್ನುವ ಕರ್ನಾಟಕ ರಾಜ್ಯವ್ಯಾಪಿ ಆವಾಸೀ ಯುವಶಿಬಿರವನ್ನು ಮೈಸೂರು ನಗರದಲ್ಲಿ ಏರ್ಪಡಿಸಲಾಗಿತ್ತು. ದಿನಾಂಕ ೨೩.೯.೨೦೧೩ ರಿಂದ ೨೫. ೯. ೨೦೧೩ರ ತನಕ ನಡೆದ ಈ ಕಾರ್ಯಕ್ರಮದಲ್ಲಿ, ನುರಿತ ಮತ್ತು ಪ್ರಾವೀಣ್ಯತೆ ಹೊಂದಿರುವ ಹಿರಿಯ ಸಂನ್ಯಾಸಿಗಳು ಮತ್ತು ಸಂಪನ್ಮೂಲ ವ್ಯಕ್ತಿಗಳು ಧ್ಯಾನ, ನೈತಿಕ ಮತ್ತು ವ್ಯಕ್ತಿತ್ವ ವಿಕಸನಕ್ಕೆ ಸಂಬಂಧಪಟ್ಟ ವಿಚಾರಗಳು, ಸಮಾಜ ಸೇವೆ. ಜೀವನಕೌಶಲ್ಯ ತರಬೇತಿ – ಇವುಗಳ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡಿದರು. ಸುಮಾರು ೩೦೦ ಯುವ ಅಭ್ಯರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಪ್ರವಚನಗಳಲ್ಲದೆ, ವಿದ್ಯಾರ್ಥಿಗಳ ನೈತಿಕ ಮತ್ತು ಆಧ್ಯಾತ್ಮಿಕ ಪ್ರವೃತ್ತಿಯನ್ನು ಕಂಡುಕೊಳ್ಳಲು ಲಿಖಿತ ಪರೀಕ್ಷೆ, ಸಂದರ್ಶನ, ಸಂಕ್ಷಿಪ್ತ ಭಾಷಣ ಹಾಗೂ ಸಮೂಹ ಚರ್ಚೆಗಳನ್ನೂ ಆಯೋಜಿಸಲಾಗಿತ್ತು. ಸ್ವಾಮಿ ಹರ್ಷಾನಂದಜಿ ಸ್ವಾಮಿ ಜಗದಾತ್ಮಾನಂದಜಿ, ಸ್ವಾಮಿ ಮುಕ್ತಿದಾನಂದಜಿ ಮುಂತಾದವರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.

'ಸಂಕಲ್ಪೋತ್ಸವ' ವಾದ ವಿವೇಕಪ್ರಭ 'ವಿವೇಕ ಚೇತನ' ಆಧ್ಯಾತ್ಮಿಕ ಶಿಬಿರ

ವಿವೇಕಪ್ರಭ ಪತ್ರಿಕೆಯ ವತಿಯಿಂದ ಪ್ರತಿವರ್ಷವೂ ಒಂದು ಆಧ್ಯಾತ್ಮಿಕ ಶಿಬಿರವನ್ನು ಆಯೋಜಿಸಲಾಗುತ್ತದೆ. ಪತ್ರಿಕೆಯ ಬಗ್ಗೆ ಆಸಕ್ತಿ ಇರುವ ಭಕ್ತರು ಮತ್ತು ಹಿತೈಷಿಗಳು ಇದರಲ್ಲಿ ಪಾಲ್ಗೊಳ್ಳುತ್ತಾರೆ. ಈ ವರ್ಷದ ಶಿಬಿರವನ್ನು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಸಭಾಂಗಣದಲ್ಲಿ ಸೆಪ್ಟೆಂಬರ್ ೨೭, ೨೮ ಮತ್ತು ೨೯ ರಂದು ನಡೆಸಲಾಯಿತು. ಸುಮಾರು ೩೫೦ ಭಕ್ತರು ಮತ್ತು ಸ್ವಯಂಸೇವಕರು ಇದರಲ್ಲಿ ಪಾಲ್ಗೊಂಡಿದ್ದರು. ಪೂಜ್ಯ ಸ್ವಾಮಿ ಸುರೇಶಾನಂದಜಿ ಅವರು ಉದ್ಘಾಟನೆ ಮಾಡಿದರು. ಸ್ವಾಮಿ ಜಗದಾತ್ಮಾನಂದಜಿ, ಸ್ವಾಮಿ ನಿತ್ಯಸ್ಥಾನಂದಜಿ, ಸ್ವಾಮಿ ಕರುಣಾಕರಾನಂದಜಿ, ಮಾತಾ ತ್ಯಾಗಮಯೀ, ಡಾ. ಕೆ. ಅನಂತರಾಮು ಪ್ರವಚನಗಳನ್ನು ಮಾಡಿದರು. ಸ್ವಾಮಿ ಮುಕ್ತಿದಾನಂದಜಿ ಅವರು ಮಾರ್ಗದರ್ಶಿತ ಧ್ಯಾನವನ್ನು ನಡೆಸಿಕೊಟ್ಟರು. ಶ್ರೀ ಇಬ್ರಾಹಿಂ ಸುತಾರ್ ಅವರ **'ಗಾನಪ್ರವಚನ'** ಮತ್ತು ವಿದ್ವಾನ್ ಎಂ.ಎಸ್. ನವೀನ್ ಅವರ **'ವಚನವಾಣಿ'** ಕಾರ್ಯಕ್ರಮಗಳು ನಡೆದವು. ಸ್ವಾಮಿ ಸ್ವಾತ್ಮಾರಾಮಾನಂದಜಿ ಮತ್ತು ವಿದ್ವಾನ್ ಗುರುರಾಜ್ ಸುಮಧುರವಾಗಿ ಭಜನೆಗಳನ್ನು ಹಾಡಿದರು. ಇದಲ್ಲದೆ, ಎರಡು ದಿನಗಳು **'ವಿವೇಕಪ್ರಭ ಪತ್ರಿಕೆಯ ಬಗ್ಗೆ ಚರ್ಚೆ'** ನಡೆಯಿತು. ಇದರಲ್ಲಿ ಸ್ವಾಮೀಜಿಯವರು ಮತ್ತು ಹಲವಾರು ಭಕ್ತರು ಮಾತನಾಡಿ, ಪತ್ರಿಕೆಯ ಪ್ರಚಾರಸಂಖ್ಯೆಯನ್ನು ಇನ್ನೂ ಹೆಚ್ಚಿಸುವ ಬಗ್ಗೆ ಸಲಹೆ–ಸೂಚನೆಗಳನ್ನು ನೀಡಿದರು. ಹಾಗೂ ಎಲ್ಲ ಭಕ್ತರೂ ಇದಕ್ಕಾಗಿ ಶ್ರಮಿಸುತ್ತೇವೆಂದು ಸಂಕಲ್ಪ ಮಾಡಿದರು. ಹೀಗೆ ಈ ಶಿಬಿರವು ವಿವೇಕಪ್ರಭ ಪತ್ರಿಕೆಯ ಪ್ರಸಾರವನ್ನು ಹೆಚ್ಚಿಸುವ **'ಸಂಕಲ್ಪೋತ್ಸವ'**ವಾಗಿ ಪರಿಣಮಿಸಿತು.

Managing Editor : Swami Muktidananda

Editor : Swami Vireshananda

Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.D-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020